ಅರಸೀಕೆರೆ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ರವರ ನ್ಯಾಯಾಲಯದಲ್ಲಿ

ಸಿ.ಸಿ. ನಂಃ **260/20**

| | | | |
|---|---|---|---|
| ಸಾಕ್ಷಿದಾರರ ಹೆಸರು | ಕವನ | ಸಿ.ಡಬ್ಲ್ಯೂ- | 3 |
| ತಂದೆ/ಗಂಡನ ಹೆಸರು | ಬೀರೇಗೌಡ | ಪಿ.ಡಬ್ಲ್ಯೂ | 2 |
| ವಯಸ್ಸು | 23 ವರ್ಷ | ಪ್ರಮಾಣ ವಚನ ಭೋಧಿಸಿದ ದಿನಾಂಕ | |
| ವೃತ್ತಿ | ವಿದ್ಯಾರ್ಥಿನಿ | | |
| ವಾಸ | ಅರಸೀಕೆರೆ | 30.09.2025 | |

ಮುಖ್ಯ ವಿಚಾರಣೆ ಸಸಅ ರವರಿಂದಃ-

ನನಗೆ ಆರೋಪಿತರು ಗೊತ್ತು. ಚಾಸಾ-**1** ನನ್ನ ತಾಯಿ. ಮೇ-**2020** ರಲ್ಲಿ ನಾನು,ನನ್ನ ತಂದೆ ತಾಯಿ ಹಾಗೂ ನನ್ನ ತಂಗಿ ಆರೋಪಿತರ ಮನೆಯಲ್ಲಿ **3,50,000/-** ರೂ.ಗಳಿಗೆ ಭೋಗ್ಯಕ್ಕೆ ಮಾತುಕತೆಯಾಗಿದ್ದು ಆ ದಿನ ಅವರಿಗೆ **3** ಲಕ್ಷ ಕೊಟ್ಟು ಅವರ ಮನೆಗೆ ವಾಸಿಸಲು ಹೋಗಿದ್ದು ಇನ್ನು **50** ಸಾವಿರ ರೂ.ಗಳನ್ನು **3** ತಿಂಗಳ ಬಳಿಕ ಕೊಡುವುದಾಗಿ ಹೇಳಿದೆವು. ಒಂದು ತಿಂಗಳ ಕಾಲ ನಾವು ಆರೋಪಿತರು ಚೆನ್ನಾಗಿದ್ದೆವು. ಅದಾದ ನಂತರ **1** ನೇ ಆರೋಪಿ ಉಳಿದ ಹಣದ ನೆಪದಲ್ಲಿ ಆಗಾಗ ನನ್ನ ತಾಯಿಯ ಬಳಿ ಬಂದು ನಾವು ಇಲ್ಲದಿದ್ದಾಗ ನಮ್ಮ ಮನೆಗೆ ಬರುವುದು ಅವರ ಜೊತೆ ಅಸಭ್ಯವಾಗಿ ವರ್ತಿಸುವುದು, ತಾನು ಹೇಳಿದ ಹಾಗೆ ಕೇಳಬೇಕು ಇಲ್ಲದಿದ್ದರೆ ಮನೆ ಖಾಲಿ ಮಾಡಬೇಕು ಎಂದು ಬೆದರಿಸುತ್ತಿದ್ದರು. ನಂತರ ದಿಃ**29-05-2020** ರಂದು ಆರೋಪಿತರು ನಾನು ಕೊಟ್ಟ **3,00,000** ರೂ.ಗಳ ಪೈಕಿ **2,90,000** ರೂ.ಗಳನ್ನು ನನ್ನ ತಾಯಿಯ ಕೈಗೆ ಕೊಟ್ಟಿದ್ದು ಮನೆ ಖಾಲಿ ಮಾಡಿ ಬೀಗ ಕೊಡುವ ಸಮಯದಲ್ಲಿ ಉಳಿದ **10** ಸಾವಿರ ರೂ. ಕೊಡುವುದಾಗಿ ಹೇಳಿದರು.

ಅದೇ ದಿನ ರಾತ್ರಿ **9-30** ಗಂಟೆಗೆ ಮನೆ ಖಾಲಿ ಮಾಡಿ ನಾನು, ನನ್ನ ತಂದೆ, ತಾಯಿ ಹಾಗೂ ನನ್ನ ತಂಗಿ ಮನೆಯ ಬೀಗ ಕೊಡಲು ಹೋದಾಗ **2** ಮತ್ತು **4** ನೇ ಆರೋಪಿತರು ನನ್ನ ತಾಯಿಯ ಕೂದಲು ಹಿಡಿದು ಎಳೆದಾಡಿ ಸೀರೆ ಹಿಡಿದು ಎಳೆದಾಡಿ ನನ್ನ ತಾಯಿಯ ಎದೆಗೆ ಜೋರಾಗಿ ನೂಕಿದರು. ಮಾರನೇ ದಿನ ಬೆಳಗ್ಗೆ **9-00** ಗಂಟೆಗೆ ನಾವು **4** ಜನರು ಹೋಗಿ ದೂರನ್ನು ಸಲ್ಲಿಸಿದೆವು. ಇತ್ತೀಚೆಗೆ ನನ್ನ ತಂದೆ ತೀರಿಕೊಂಡಿರುತ್ತಾರೆ. ಈ ಬಗ್ಗೆ ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ.

ನ್ಯಾಯಾಲಯದಲ್ಲಿರುವ **1** ಮತ್ತು **2** ನೇ ಆರೋಪಿತರನ್ನು ನೋಡಿ ಗುರುತಿಸಿದ್ದು, **3** ಮತ್ತು **4** ನೇ ಆರೋಪಿತರು ಗೈರು ಹಾಜರಿದ್ದು ಅವರ ಪರ ವಕೀಲರು ಅವರ ಗುರುತಿಸುವಿಕೆಯ ಬಗ್ಗೆ ತಕರಾರು ಮಾಡಿರುವುದಿಲ್ಲ.

<u>ಪಾಟೀ ಸವಾಲು ಶ್ರೀ ಎಸ್.ಪಿ. ವಕೀಲರಿಂದಃ-</u>

**2009** ರಲ್ಲಿ ನಾನು ಹಾಗೂ ನನ್ನ ತಾಯಿ ನನ್ನ ತಂದೆ ನಮ್ಮನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ ಎಂದು ಮತ್ತು ನನ್ನ ತಾಯಿಗೆ ಗಂಡು ಮಕ್ಕಳು ಇಲ್ಲಾ ಎಂಬ ಕಾರಣಕ್ಕೆ ದೌರ್ಜನ್ಯ ಮಾಡಿದ್ದು ಆ ಬಗ್ಗೆ ಕೇಸು ಆಗಿತ್ತು ಎಂದರೆ ಸರಿ. ಆ ಕಾರಣದಿಂದ ನ್ಯಾಯಾಲಯದ ಕಲಾಪಗಳು ಅಲ್ಪ ಸ್ವಲ್ಪ ಗೊತ್ತಿವೆ ಎಂದರೆ ಸರಿ. ಸಾಕ್ಷಿಗೆ ತಾವು ಆರೋಪಿತರ ಮನೆಯಲ್ಲಿ ಭೋಗ್ಯಕ್ಕೆ ಇದ್ದ ಬಗ್ಗೆ ಒಪ್ಪಿಕೊಂಡಿದ್ದು ಅದು ಪೆನ್ನಿನಿಂದ ಅಡ್ಡದಿಡ್ಡಿಯಾಗಿ ಹೊಡೆದು ಹಾಕಿದ್ದು, ಸಾಕ್ಷಿ ಒಪ್ಪಿಕೊಂಡಿದ್ದರಿಂದ ಅದನ್ನು ಈಗಾಗಲೇ ನಿಡಿ-**1** ಎಂದು ಗುರುತಿಸಲ್ಪಟ್ಟಿದೆ. ಅದರಲ್ಲಿ ಬರೆದ ವಿಷಯ ಸರಿ ಇರುತ್ತದೆ. ಆ ಕರಾರಿನಂತೆ **3** ಲಕ್ಷ ರೂ.ಗಳ ಪೈಕಿ ನಾನು **2,90,000/-** ರೂ.ಗಳನ್ನು ಪಡೆದಿರುತ್ತೇನೆಂದರೆ ಸರಿ. ಆ ಕರಾರು ಪತ್ರದ ಪ್ರಕಾರ ಬಣ್ಣದ ಬಾಬ್ತು ಎಂದು **8,000/-** ರೂ. ಗಳನ್ನು ಆರೋಪಿತರು ಹಿಡಿದುಕೊಂಡಿರುತ್ತಾರೆಂದರೆ ಸರಿ. ಆರೋಪಿತರು ಕೇವಲ **2,000/-** ರೂ.ಗಳನ್ನು ಮಾತ್ರ ಕೊಡುವುದು ಬಾಕಿ ಉಳಿದಿತ್ತು ಎಂದರೆ ಸರಿ. ಮಾರ್ಚ್ ತಿಂಗಳಲ್ಲಿ ನನ್ನ ತಾಯಿಯ ನಡವಳಿಕೆ ಸರಿ ಇಲ್ಲ ಎಂದು ಮನೆ ಖಾಲಿ ಮಾಡಲು ಆರೋಪಿತರು ಹೇಳಿದರು ಎಂದರೆ ಸರಿಯಲ್ಲ. ನಾವು ಮೇ ತಿಂಗಳಲ್ಲಿ ಮನೆ ಖಾಲಿ ಮಾಡಿರುತ್ತೇವೆಂದರೆ ಸರಿ. ನಾವು ಒಂದು ತಿಂಗಳ ವಿದ್ಯುತ್ ಚ್ಛಕ್ತಿ ಬಿಲ್ಲನ್ನು ಕಟ್ಟಿರಲಿಲ್ಲ ಎಂದರೆ ಸರಿ. ಬಣ್ಣದ ಬಾಬ್ತು ಹಾಗೂ ವಿದ್ಯುತ್‌ಚ್ಛಕ್ತಿ ಬಿಲ್ಲಿನ ಪೈಕಿ ಆರೋಪಿತರು **10** ಸಾವಿರ ರೂ. ಹಿಡಿದುಕೊಂಡಿದ್ದರು ಅದನ್ನು ಕೊಡಿ ಎಂದು ಜಗಳ ಆಡಲು ಪ್ರಾರಂಭಿಸಿದೆನು ಎಂದರೆ ಸರಿಯಲ್ಲ. ದಿಃ**30-05-2020** ರಂದು ಆರೋಪಿತರು ನನ್ನ ವಿರುದ್ದ ದೂರು ಸಲ್ಲಿಸಿರುತ್ತಾರೆಂದರೆ ಸರಿ. ಅವರು ದೂರು ಕೊಟ್ಟ ನಂತರ ನಾನು ಉದ್ದೇಶ ಪೂರ್ವಕವಾಗಿ ಆರೋಪಿತರ ವಿರುದ್ದ ಸುಳ್ಳು ದೂರನ್ನು ನೀಡಿರುತ್ತೇನೆಂದರೆ ಸರಿಯಲ್ಲ. **3** ಮತ್ತು **4** ನೇ ಆರೋಪಿತರಿಗೆ **75-80** ವರ್ಷ ವಯಸ್ಸಾಗಿದೆ ಎಂದರೆ ಸರಿಯಲ್ಲ. ಅವರಿಬ್ಬರಿಗೆ ವಯಸ್ಸಾಗಿದ್ದು ಅವರು ಕೆಲಸ ಕಾರ್ಯ ಮಾಡುವುದಿಲ್ಲ ಎಂದರೆ ಸರಿಯಲ್ಲ. ಘಟನೆ ದಿನ ನನ್ನ ತಾಯಿಗೆ ಮಾತ್ರ

ಹೊಡೆದಿರುತ್ತಾರೆ. ನಾನು ತಾಯಿ ಹುಟ್ಟಿದ್ದ ಸೀರೆಯನ್ನು ಪೋಲೀಸರು ವಶಪಡಿಸಿಕೊಂಡಿಲ್ಲ. ಘಟನೆ ಆದ ದಿನ ಕತ್ತಲೆಯಾಗಿದ್ದರಿಂದ ಅದೇ ದಿನ ಪೋಲೀಸ್ ದೂರು ಸಲ್ಲಿಸಲಾಗಲಿಲ್ಲ. ಘಟನೆಯಾದ ನನ್ನ ತಾಯಿ ಅರಸೀಕೆರೆ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತಾರೆ. ವೈದ್ಯರ ಬಳಿ ನಾವು ಘಟನೆ ಬಗ್ಗೆ ಹೇಳಿಲ್ಲ. ಆ ಘಟನೆಯಿಂದ ನನ್ನ ತಾಯಿಯು ಸುಸ್ತಾಗಿದ್ದರು. ನಾನು **10** ಸಾವಿರ ಕೊಡಬೇಕೆಂದು ಆರೋಪಿತರನ್ನು ಕೇಳಿದಾಗ ಆರೋಪಿತರು ನಿಡಿ-**1** ನ್ನು ತೋರಿಸಿ ಅದರಂತೆ ಆ ಹಣವನ್ನು ಹಿಡಿದುಕೊಂಡಿರುತ್ತೇವೆಂದು ಹೇಳಿದಾಗ ನನ್ನ ತಾಯಿ ಅದನ್ನು ಪೆನ್ನಿನಿಂದ ಗೀಜಿ ಅದರಲ್ಲಿರುವ ವಿಷಯವನ್ನು ಹೊಡೆದು ಹಾಕಲು ಪ್ರಯತ್ನಿಸಿರುತ್ತೇನೆಂದರೆ ಸರಿಯಲ್ಲ. ನಾವು ಆರೋಪಿತರ ಜಾತಿ ನಿಂದನೆ ಮಾಡಿ ಅವರಿಗೆ ಬೆದರಿಸಿ ಹೆದರಿಕೆ ಹಾಕಿ ಹೋದೆವು ಎಂದರೆ ಸರಿಯಲ್ಲ. ಆ ರೀತಿ ಬೆದರಿಕೆ ಹಾಕಿದ್ದರಿಂದ **3** ಮತ್ತು **4** ನೇ ಆರೋಪಿತರ ಆರೋಗ್ಯದಲ್ಲಿ ಏರುಪೇರಾಗಿರುತ್ತದೆಂದರೆ ಸರಿಯಲ್ಲ. ಆ ಕಾರಣದಿಂದ ನಾವು ಸದರಿ ಸುಳ್ಳು ದೂರನ್ನು ಕೊಟ್ಟಿರುತ್ತೇನೆಂದರೆ ಸರಿಯಲ್ಲ. ಘಟನೆ ಸಮಯದಲ್ಲಿ ಅಕ್ಕಪಕ್ಕದ ಮನೆಯವರು ಅಲ್ಲಿ ನಿಂತಿದ್ದರು ಅವರು ಯಾರು ಎಂದು ನಾನು ಗಮನಿಸಲಿಲ್ಲ. ಮೇಲೆ ಹೇಳಿದ ಕಾರಣದಿಂದ ಆರೋಪಿತರು ನನ್ನ ತಾಯಿಯ ವಿರುದ್ಧ ದೂರು ಸಲ್ಲಿಸಿದ ನಂತರ ನಾವು ಉದ್ದೇಶಪೂರ್ವಕವಾಗಿ ಆರೋಪಿತರು ನಮಗೆ ಯಾವುದೇ ತೊಂದರೆ ಕೊಡದೇ ಇದ್ದರೂ ಅವರ ವಿರುದ್ಧ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಿರುತ್ತೇನೆ.

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

( ಕಿರಣ್ ಕುಮಾರ್ ಡಿ. ವಡಿಗೇರಿ )
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಅರಸೀಕೆರೆ.ದಿಃ **30-09-2025.**